RNU AIR DHARWAD

# FEBRUARY 03, 2025

## AKASHAVANI - DHARWAD

## PRADESH SAMACHARA (KANNADA) 07.05 A.M.

<><><>

**ಆಕಾಶವಾಣಿ**

**ಪ್ರದೇಶ ಸಮಾಚಾರ**

**ಓದಿದವರು: ಹರ್ಷವರ್ಧನ ಶೀಲವಂತ**

<><><>

**ಮುಖ್ಯಾಂಶಗಳು**

<><><>

- **ಮಹಾತ್ಮ ಗಾಂಧೀಜಿ ವಿಚಾರ ಪ್ರಚಾರಕ್ಕೆ, ಧಾರವಾಡದಲ್ಲಿ ನೂತನ ಗಾಂಧಿ ಭವನ ಅಸ್ತಿತ್ವಕ್ಕೆ.**
- **ಗಾಂಧಿವಾದಿ ಎಚ್. ನರಸಿಂಹಯ್ಯ ಸ್ಮರಣಾರ್ಥ, ಗೌರಿಬಿದನೂರು ತಾಲೂಕು, ಹೊಸೂರಿನಲ್ಲಿ, ಅಭಿವೃದ್ಧಿ ಪ್ರಾಧಿಕಾರ ಸ್ಥಾಪನೆ.**
- **ಭಾರತ ಇಂದು, ಮಹತ್ವದ 'ಸ್ಟೋರಿ ಟೆಲ್ಲಿಂಗ್ ಹಬ್' – ಕೇಂದ್ರ ಸಚಿವ ಎಲ್. ಮುರುಗನ್.**
- **ಕರಾವಳಿ ಕಾವಲುಪಡೆ ರೈಸಿಂಗ್ ಡೇ – ರಾಜ್ಯಪಾಲ ಗೆಹ್ಲೋಟ್ ಭಾಗಿ.**
- **ಅಂತಾರಾಷ್ಟ್ರೀಯ ಜೌಗು ಪ್ರದೇಶ ಜನಜಾಗ್ರತಿ ದಿನಾಚರಣೆ.**

<><><>

**ಈಗ ವಾರ್ತೆಗಳ ವಿವರ**

<><><>

**ಮಹಾತ್ಮ ಗಾಂಧೀಜಿಯವರ ವಿಚಾರಧಾರೆಗಳನ್ನು ಯುವಜನತೆಗೆ ಪ್ರಚುರ ಪಡಿಸಲು, ಧಾರವಾಡದ ಗುಲಗಂಜಿಕೊಪ್ಪದಲ್ಲಿ ಭವ್ಯ ಗಾಂಧಿ ಭವನ ನಿರ್ಮಾಣಗೊಂಡಿದೆ. ಸದ್ಯದಲ್ಲೇ ಭವನ ಲೋಕಾರ್ಪಣೆಗೊಳ್ಳಲಿದೆ. ಧಾರವಾಡ ಜಿಲ್ಲೆ, ಹುಬ್ಬಳ್ಳಿಯ ಪದ್ಮಶ್ರೀ ಸರ್ದಾರ ವೀರನಗೌಡ ಪಾಟೀಲ ಹಾಗೂ ಮಾತೋಶ್ರೀ ಶ್ರೀಮತಿ ನಾಗಮ್ಮತಾಯಿ ಪಾಟೀಲ, ಮಹಿಳಾ ವಿದ್ಯಾಪೀಠದಲ್ಲಿ ಗಾಂಧೀಜಿ ಚಿತಾಭಸ್ಮ, ಬೆಳಗಾವಿಯಲ್ಲಿ ನಡೆದ 1924ರ ಐತಿಹಾಸಿಕ ಕಾಂಗ್ರೆಸ್ ಮಹಾಧಿವೇಶನದ ಸಂದರ್ಭದಲ್ಲಿ, ಗಾಂಧೀಜಿ ಭೇಟಿ ನೀಡಿದ ಮಹತ್ವದ ಸ್ಥಳಗಳು, ಪ್ರೇರಣಾದಾಯಿಯಾಗಿವೆ.**

**ಈ ಕುರಿತು ಒಂದು ವರದಿ..**

***ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಕರ್ಣಧಾರತ್ವದಲ್ಲಿ, ಧಾರವಾಡದ ಗುಲಗಂಜಿಕೊಪ್ಪದಲ್ಲಿ, 29 ಗುಂಟೆ ವಿಶಾಲ ಜಾಗೆಯಲ್ಲಿ, ಗಾಂಧಿ ಭವನ ಭವ್ಯವಾಗಿ ರೂಪುಗೊಂಡಿದೆ. 3 ಕೋಟಿ ರೂಪಾಯಿ ವೆಚ್ಚದಲ್ಲಿ, ಗಾಂಧಿ ಭವನ ನಿರ್ಮಾಣಗೊಂಡಿದ್ದು, ಸ್ಮಾರಕದ ಗೋಡೆಗಳ ಮೇಲೆ ಮಹಾತ್ಮ ಗಾಂಧೀಜಿಯವರ ಜೀವನದ ಚಾರಿತ್ರಿಕ ಘಟನೆಗಳನ್ನು ಬಿಂಬಿಸುವ, ಚಿತ್ರಗಳನ್ನು ಬಿಡಿಸಲಾಗಿದೆ. ದಂಡಿ ಯಾತ್ರೆ ಸೇರಿದಂತೆ, ವಿವಿಧ ಚಳವಳಿಗಳನ್ನು, ಪ್ರತಿಮೆಗಳಲ್ಲಿ ಅರಳಿಸಲಾಗಿದೆ.***

*ಗಾಂಧಿ ಭವನ, ಗಾಂಧೀಜಿಯವರ ಜೀವನ ಸಂದೇಶಗಳನ್ನು ಸಾರುವ, ವಿಚಾರ ಸಂಕಿರಣ, ತರಬೇತಿ, ನಾಟಕ, ಗುಡಿ ಕೈಗಾರಿಕೆ ಮೊದಲಾದ ಗಾಂಧಿ ವ್ಯಕ್ತಿತ್ವ ಮತ್ತು ಕೃತಿತ್ವ ಪ್ರೇರಿತ ಕಾರ್ಯಚಟುವಟಿಕೆಗಳನ್ನು ಆಯೋಜಿಸಲಿದೆ. ನೂತನ ಗಾಂಧಿ ಭವನದ ಕುರಿತು, ಪ್ರದೇಶ ಸಮಾಚಾರಕ್ಕಾಗಿ ಮಾಹಿತಿ ನೀಡಿದ್ದಾರೆ, ಧಾರವಾಡ ಜಿಲ್ಲಾಧಿಕಾರಿ ದಿವ್ಯಾ ಪ್ರಭು.*

<><><>

ವಿವೇಕ 49 + ದಿವ್ಯಾ ಪ್ರಭು ಧ್ವನಿ 60 ಸೆಕೆಂದುಗಳು

<><><>

ವೈಚಾರಿಕ ಮತ್ತು ವೈಜ್ಞಾನಿಕ ಚಿಂತನೆಗಳ ಸಾಕಾರ ಮೂರ್ತಿಯಂತಿದ್ದ, ಪದ್ಮಭೂ ’ಣ ಎಚ್. ನರಸಿಂಹಯ್ಯ ಸ್ಮರಣಾರ್ಥ, ಅಭಿವೃದ್ಧಿ ಪ್ರಾಧಿಕಾರ ಸ್ಥಾಪಿಸಲಾಗುವುದು ಎಂದು, ಉನ್ನತ ಶಿಕ್ಷಣ ಖಾತೆ ಸಚಿವ ಎಂ.ಸಿ.ಸುಧಾಕರ್ ತಿಳಿಸಿದ್ದಾರೆ. ಡಾಕ್ಟರ್ ಎಚ್.ಎನ್ ಅವರ ಹುಟ್ಟೂರು, ಚಿಕ್ಕಬಳ್ಳಾಪುರ ಜಿಲ್ಲೆ, ಗೌರಿಬಿದನೂರು ತಾಲೂಕು, ಹೊಸೂರು ಗ್ರಾಮದಲ್ಲಿ, ಮೇಷ್ಟ್ರ ಜನ್ಮ ಶತಾಬ್ದಿ ಹಾಗೂ ಅವರು ಓದಿದ, ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ, ಶತಮಾನೋತ್ಸವ ಉದ್ಘಾಟಿಸಿ ಮಾತನಾಡಿದರು. ಎಚ್.ಎನ್. ಹುಟ್ಟೂರು ಹೊಸೂರು ಗ್ರಾಮದಲ್ಲಿ, ಕರ್ನಾಟಕ ಪಬ್ಲಿಕ್ ಶಾಲೆ, ಕಲಾಭವನ, ರಾಷ್ಟ್ರೀಯ ವಿಜ್ಞಾನ ಪಾರ್ಕ್, ಅಮರಧಾಮ ಮತ್ತು ಅವರು ಓದಿದ ಶಾಲೆ ಒಳಗೊಂಡ, ಡಾಕ್ಟರ್ ಎಚ್.ನರಸಿಂಹಯ್ಯ ಅಭಿವೃದ್ಧಿ ಪ್ರಾಧಿಕಾರ ಸದ್ಯದಲ್ಲೇ ಕಾರ್ಯಾರಂಭಿಸಲಿದೆ ಎಂದರು. ಮುಖ್ಯಮಂತ್ರಿ ಸೂಚನೆ ಮೇರೆಗೆ, ಸಚಿವ ಎಚ್.ಕೆ. ಪಾಟೀಲ, ಪ್ರಾಧಿಕಾರದ ರೂಪುರೇ ’ಗಳ ಕರಡು ತಯಾರಿಸುತ್ತಿದ್ದಾರೆ ಎಂದು, ಸಚಿವರು ಹೇಳಿದರು.

<><><>

ಭಾರತದ ಸಿನೆಮಾಗಳು, ಅಂತಾರಾಷ್ಟ್ರೀಯ ಮಟ್ಟದಲ್ಲಿ ಹೆಸರುಗಳಿಸಿ, ಹಾಲಿವುಡ್ ಸಿನೆಮಾಗಳಿಗೆ ಪೈಪೋಟಿ ನೀಡುವ ಮಟ್ಟಕ್ಕೆ ಬೆಳೆದಿವೆ ಎಂದು, ಕೇಂದ್ರ ಮಾಹಿತಿ ಮತ್ತು ಪ್ರಸಾರ ಖಾತೆ ರಾಜ್ಯ ಸಚಿವ, ಎಲ್.ಮುರುಗನ್ ತಿಳಿಸಿದ್ದಾರೆ. ಮೈಸೂರು ಮುಕ್ತ ವಿಶ್ವವಿದ್ಯಾಲಯದ ಸಭಾಂಗಣದಲ್ಲಿ ನಡೆದ, ‘ಪರಿದೃಶ್ಯ ಅಂತಾರಾಷ್ಟ್ರೀಯ ಕಿರುಚಿತ್ರ ಹಾಗೂ ಸಾಕ್ಷ್ಯಚಿತ್ರ ಹಬ್ಬ’ದಲ್ಲಿ ಪಾಲ್ಗೊಂಡು, ಅವರು ಮಾತನಾಡಿದರು. ಭಾರತ ಇಂದು, ಮಹತ್ವದ ಸ್ಟೋರಿ ಟೆಲ್ಲಿಂಗ್ ಹಬ್ ಆಗಿದೆ. ಎಲ್ಲ ಬಗೆಯ ಪೋಸ್ಟ್ ಪ್ರೊಡಕ್ಷನ್ ತಂತ್ರಜ್ಞಾನ ಈಗ ಭಾರತದಲ್ಲಿ ಲಭ್ಯವಿದೆ. ‘ರಾಜಾ ಹರಿಶ್ಚಂದ್ರ’ ಬ್ಲಾಕ್ ಆಂಡ್ ವೈಟ್ ಸಿನಿಮಾ ದಿಂದ ಪ್ರಾರಂಭಗೊಂಡು, ಇಂದು ಓ.ಟಿ.ಟಿ. ಮಟ್ಟಕ್ಕೆ ಭಾರತೀಯ ಚಿತ್ರೋದ್ಯಮ ಬೆಳೆದಿದೆ. ಎನಿಮೇ ’ನ್ ಉದ್ಯಮ ಸಹ ಪ್ರವರ್ಧಮಾನಕ್ಕೆ ಬಂದಿದೆ ಎಂದರು. ನಟ ಸುನೀಲ್ ಪುರಾಣಿಕ್, ಮೈಸೂರ್ ಫಿಲ್ಮ್ ಸೊಸೈಟಿ ಅಧ್ಯಕ್ಷ ಚಂದ್ರಶೇಖರ ಸೇರಿದಂತೆ, ಗಣ್ಯರು ಭಾಗವಹಿಸಿದ್ದರು.

<><><>

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..

<><><>

ಆಕಾಶವಾಣಿ ಸುದ್ದಿಗಳಿಗಾಗಿ, ನಮ್ಮ **x** ಖಾತೆ **@airnews_dharwad** ಹಾಗೂ

ನಮ್ಮ ಫೇಸ್ಬುಕ್ ಖಾತೆ **Airrnu Dharwad** ಅನುಸರಿಸಿ.

<><><>

ಧಾರವಾಡ ಜಿಲ್ಲೆ, ಹುಬ್ಬಳ್ಳಿ ತಾಲೂಕು ನವನಗರದ, ಭಾರತೀಯ ಮಾಹಿತಿ ತಂತ್ರಜ್ಞಾನ ಸಂಸ್ಥೆ – ಟ್ರಿಪಲ್ ಐ.ಟಿ.ಯನ್ನು, ಮಾಹಿತಿ ಮತ್ತು ಜೈವಿಕ ತಂತ್ರಜ್ಞಾನದ ನವೋದ್ಯಮಗಳ ಪಾರಮ್ಯತೆ ಕೇಂದ್ರವನ್ನಾಗಿಸಲು, ಕ್ರಮ ಕೈಗೊಳ್ಳಲಾಗುವುದು ಎಂದು, ಐ.ಟಿ.–ಬಿ.ಟಿ. ಖಾತೆ ಸಚಿವ ಪ್ರಿಯಾಂಕ್ ಖರ್ಗೆ ತಿಳಿಸಿದ್ದಾರೆ. ಎಕ್ಸ್ ಮಾಧ್ಯಮದಲ್ಲಿ ಈ ವಿಷಯ ಪ್ರಕಟಿಸಿರುವ ಸಚಿವರು, ರಾಜ್ಯದ ದ್ವಿತೀಯ ಸ್ತರದ ನಗರಗಳಲ್ಲಿ, ಕಳೆದ ವರ್ಷ, 2 ಸಾವಿರ ನವೋದ್ಯಮಗಳು ಆರಂಭವಾಗಿವೆ. ಆ ಪೈಕಿ,

986 ನವೋದ್ಯಮಗಳಿಗೆ ಸರ್ಕಾರ ನೆರವು ನೀಡಿದೆ. 28 ಸ್ಟಾರ್ಟ್ ಅಪ್‌ಗಳನ್ನು ಮಹಿಳೆಯರೇ ಮುನ್ನಡೆಸುತ್ತಿದ್ದಾರೆ, ಎಂದಿದ್ದಾರೆ.

<><><>

ಶಿವಮೊಗ್ಗದ, ಐತಿಹಾಸಿಕ ಚಂದ್ರಗುತ್ತಿ ಕೋಟೆಯೊಳಗೆ, ಅಪರೂಪದ ವೀರ್ಗಲ್ಲನ್ನು, ಪ್ರೌಢ ಶಾಲೆ ನಿವೃತ್ತ ಶಿಕ್ಷಕ ಯಶವಂತಪ್ಪ ಪತ್ತೆ ಹಚ್ಚಿದ್ದಾರೆ. ಇತಿಹಾಸ ಸಂಶೋಧಕ ಶ್ರೀಪಾದ ಬಿಚ್ಚುಗತ್ತಿ, ಪತ್ತೆಯಾದ ವೀರ್ಗಲ್ಲಿನ ಬಗ್ಗೆ, ಪ್ರದೇಶ ಸಮಾಚಾರಕ್ಕಾಗಿ ಮಾಹಿತಿ ನೀಡಿ, ವಿಜಯನಗರ ಅರಸರ ಆಳ್ವಿಕೆ ಕಾಲದ ವೀರ್ಗಲ್ಲಿನಲ್ಲಿ ಆರಗದ ದೇವಪ್ಪ ಒಡೆಯರ ಉಲ್ಲೇಖವಿದೆ ಎಂದಿದ್ದಾರೆ.

<><><>

ಇತಿಹಾಸಜ್ಞ ಶ್ರೀಪಾದ ಬಿಚ್ಚುಗತ್ತಿ ಧ್ವನಿ 50 ಸೆಕೆಂದುಗಳು

<><><>

ವಿಶ್ವದ ಅತಿ ದೊಡ್ಡ ಕರಾವಳಿ ಕಾವಲುಪಡೆ ಎಂಬ ಹೆಗ್ಗಳಿಕೆಗೆ, ಭಾರತದ ಕರಾವಳಿ ರಕ್ಷಣಾ ಪಡೆ ಪಾತ್ರವಾಗಿದೆ. ಭಾರತದ ಕಡಲ ತಡಿಗಳನ್ನು ಅಪ್ರತಿಮ ಸಾಹಸ, ಶೌರ್ಯಗಳಿಂದ ರಕ್ಷಿಸುತ್ತಿದೆ ಎಂದು, ರಾಜ್ಯಪಾಲ ಥಾವರಚಂದ್ ಗೆಹ್ಲೋಟ್ ಶ್ಲಾಘಿಸಿದ್ದಾರೆ. ಮಂಗಳೂರಿನಲ್ಲಿ ಆಯೋಜಿತ, ಕರಾವಳಿ ರಕ್ಷಣಾ ಪಡೆಯ, 49ನೇ ಸಂಸ್ಥಾಪನಾ ದಿನಾಚರಣೆಯಲ್ಲಿ ಅವರು ಪಾಲ್ಗೊಂಡು, ಮಾತನಾಡಿದರು. ಭಾರತೀಯ ಕರಾವಳಿ ರಕ್ಷಣಾ ಪಡೆ, ಪೂರ್ವ ಏ ಷ್ಯಾ, ಆಗ್ನೇಯ ಏ ಷ್ಯಾ ಮತ್ತು ಮಧ್ಯ ಪ್ರಾಚ್ಯದ ಹಲವು ದೇಶಗಳೊಂದಿಗೆ, ದ್ವಿ ಪಕ್ಷೀಯ ಒಪ್ಪಂದಗಳನ್ನು ಮಾಡಿಕೊಂಡಿದೆ. ಜಂಟಿ ಸಮಾರಾಭ್ಯಾಸಗಳನ್ನೂ ಸಹ ಕೈಗೊಂಡಿದೆ. ನೈಸರ್ಗಿಕ ವಿಕೋಪಗಳ ಸಂದರ್ಭದಲ್ಲೂ, ಕರಾವಳಿ ರಕ್ಷಣಾ ಪಡೆ, ನಾಗರಿಕರ ರಕ್ಷಣೆಯಲ್ಲಿ ಮಹತ್ವದ ಪಾತ್ರ ವಹಿಸಿದೆ ಎಂದರು. ಕರ್ನಾಟಕ ಕರಾವಳಿ ರಕ್ಷಣಾ ಪಡೆಯ ಕಮಾಂಡರ್ ಪ್ರವೀಣ್ ಕುಮಾರ್ ಮಿಶ್ರಾ ಪಾಲ್ಗೊಂಡಿದ್ದರು.

<><><>

ಅಂತಾರಾಷ್ಟ್ರೀಯ ತರೀಭೂಮಿ, ಜೌಗು ಪ್ರದೇಶಗಳ ದಿನವನ್ನು, ಆಚರಿಸಲಾಯಿತು. ವನ್ಯಜೀವಿಗಳಿಗೆ ಆವಾಸಸ್ಥಾನ ಒದಗಿಸುವಲ್ಲಿ, ಕಾಡುಗಳು ಎಷ್ಟು ಮುಖ್ಯವೋ, ಅಷ್ಟೇ ಮುಖ್ಯ, ರಾಮ್‌ಸಾರ್ ವೆಟ್ ಲ್ಯಾಂಡ್ಸ್ ಸೇರಿದಂತೆ, ಕೆರೆ, ನದಿ, ತೊರೆ, ಹಿನ್ನೀರಿನ ತಾಣಗಳು, ಸದಾ ನೀರು ಜಿನುಗುವ ಸ್ಥಳಗಳು, ಭತ್ತದ ಗದ್ದೆಗಳು ಮುಖ್ಯವಾಗಿ, ಜಲವಾಸಿ ಜೀವಿಗಳಿಗೆ, ಪ್ರಧಾನ ನೆಲೆ ಒದಗಿಸುವ, ಜೌಗು ಪ್ರದೇಶ. ಜೀವವೈವಿಧ್ಯದ ಪೋಷಣೆಯಲ್ಲಿ ತರೀ ಭೂಮಿಗಳ ಪಾತ್ರದ ಕುರಿತು ಮತ್ತು ಸಮುದಾಯದ ಸಹಭಾಗಿತ್ವದಲ್ಲಿ, ಅವುಗಳ ಸಂರಕ್ಷಣೆಗಾಗಿ, ಜನ ಜಾಗ್ರತಿ ಮೂಡಿಸಲಾಯಿತು.

<><><>

ಈಗ ಸಂಕ್ಷಿಪ್ತ ಸುದ್ದಿಗಳು:

<><><>

ಧಾರವಾಡ ಮುರುಘಾಮಠದ, ಶ್ರೀಮದ್ ಅಥಣಿ ಮುರುಘೇಂದ್ರ ಮಹಾಶಿವಯೋಗಿಗಳ, 95ನೇ ಜಾತ್ರಾ ಮಹೋತ್ಸವದ ಹಿನ್ನೆಲೆ, ಇಂದು ಸಂಜೆ 4 ಗಂಟೆಗೆ ರಥೋತ್ಸವ ಜರುಗಲಿದೆ.

<><><>

ಗದಗನಲ್ಲಿ ಜರುಗಿದ, ಶಿವಯೋಗಿ ಶ್ರೀ ಸಿದ್ಧರಾಮೇಶ್ವರರ 852ನೇ ಜಯಂತ್ಯುತ್ಸವದಲ್ಲಿ, ಸಚಿವ ಎಚ್.ಕೆ. ಪಾಟೀಲ ಪಾಲ್ಗೊಂಡಿದ್ದರು.

<><><>

ವಸಂತ ಪಂಚಮಿ ಮತ್ತು ಸರಸ್ವತಿ ಪೂಜೆಯನ್ನು, ನಿನ್ನೆ ದೇಶಾದ್ಯಂತ ಶ್ರದ್ಧಾ, ಭಕ್ತಿಯಿಂದ ಆಚರಿಸಲಾಯಿತು. ರಾಷ್ಟ್ರಪತಿ ದ್ರೌಪದಿ ಮುರ್ಮು ಮತ್ತು ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು, ಶುಭಾಶಯ ಕೋರಿದರು.

<><><>

ಸಣ್ಣ ಹಣಕಾಸು ಸಂಸ್ಥೆಗಳ ಸಾಲ ವಸೂಲಾತಿ ದೌರ್ಜನ್ಯ ತಡೆಗಟ್ಟುವಂತೆ ಒತ್ತಾಯಿಸಿ, ಕನ್ನಡ ಚಳವಳಿ ವಾಟಾಳ ಪಕ್ಷದ ಅಧ್ಯಕ್ಷ, ವಾಟಾಳ್ ನಾಗರಾಜ್ ಮೈಸೂರಿನಲ್ಲಿ ‘ಒನಕೆ ಚಳವಳಿ’ ನಡೆಸಿದರು.

<><><>

ಚನ್ನಪಟ್ಟಣದ ಪ್ರಸಿದ್ಧ ಪ್ರವಾಸಿ ತಾಣ, ಕಣ್ವ ಜಲಾಶಯಕ್ಕೆ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಭೇಟಿ ನೀಡಿ, ಪರಿಶೀಲಿಸಿದರು.

<><><>

ಘಾಟಿ ಸುಬ್ರಹ್ಮಣ್ಯ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ ವತಿಯಿಂದ ಆಯೋಜಿತ, ರಾಸುಗಳ ಜಾತ್ರೆಯಲ್ಲಿ, ಉತ್ತಮ ರಾಸುಗಳನ್ನು ಸಾಕಿದ ಮಾಲಿಕರಿಗೆ, ಸಚಿವ ಕೆ.ಎಚ್. ಮುನಿಯಪ್ಪ ಬಹುಮಾನ ನೀಡಿದರು.

<><><>

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಎಡಗಾಲಿನ ಮಂಡಿಯಲ್ಲಿ ನೋವು ಕಾಣಿಸಿಕೊಂಡ ಹಿನ್ನೆಲೆ, ಬೆಂಗಳೂರಿನ ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿದ್ದಾರೆ.

<><><>

ನಕ್ಸಲ್ ಚಟುವಟಿಕೆಯಲ್ಲಿ ಗುರುತಿಸಿಕೊಂಡಿದ್ದ, ತೊಂಬಟ್ಟು ಲಕ್ಷ್ಮೀ ಉಡುಪಿ ಜಿಲ್ಲಾಧಿಕಾರಿ ಕಚೇರಿಗೆ ಶರಣಾಗಿದ್ದಾಗಿ, ನಕ್ಸಲ್ ಶರಣಾಗತಿ ಹಾಗೂ ಪುನರ್ ವಸತಿ ಸಮಿತಿಯ ಸದಸ್ಯ ಶ್ರೀಪಾಲ್ ತಿಳಿಸಿದ್ದಾರೆ.

<><><>

ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:

<><><>

- ಮಹಾತ್ಮ ಗಾಂಧೀಜಿ ವಿಚಾರ ಪ್ರಚಾರಕ್ಕೆ, ಧಾರವಾಡದಲ್ಲಿ ನೂತನ ಗಾಂಧಿ ಭವನ ಅಸ್ತಿತ್ವಕ್ಕೆ.
- ಗಾಂಧಿವಾದಿ ಎಚ್. ನರಸಿಂಹಯ್ಯ ಸ್ಮರಣಾರ್ಥ, ಗೌರಿಬಿದನೂರು ತಾಲೂಕು, ಹೊಸೂರಿನಲ್ಲಿ, ಅಭಿವೃದ್ಧಿ ಪ್ರಾಧಿಕಾರ ಸ್ಥಾಪನೆ.
- ಭಾರತ ಇಂದು, ಮಹತ್ವದ ‘ಸ್ಟೋರಿ ಟೆಲ್ಲಿಂಗ್ ಹಬ್’ – ಕೇಂದ್ರ ಸಚಿವ ಎಲ್. ಮುರುಗನ್.
- ಕರಾವಳಿ ಕಾವಲುಪಡೆ ರೈಸಿಂಗ್ ಡೇ – ರಾಜ್ಯಪಾಲ ಗೆಹ್ಲೋಟ್ ಭಾಗಿ.
- ಅಂತಾರಾಷ್ಟ್ರೀಯ ಜೌಗು ಪ್ರದೇಶ ಜನಜಾಗೃತಿ ದಿನಾಚರಣೆ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.

<><><>